ಓ ಎಸ್ ನಂ. 4/2016

ಡಿ ಡಬ್ಲ್ಯು 1

ದಿನಾಂಕ 23-06-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಕೆ ಎ ವಕೀಲರಿಂದಃ

ಪಡಿತರ ಧಾನ್ಯವನ್ನು ಬಡವರಿಗೆ ಕಡಿಮೆ ಬೆಲೆಯಲ್ಲಿ ವಿತರಿಸುವ ಸಲುವಾಗಿ ನ್ಯಾಯಬೆಲೆ ಪರವಾನಿಗಿಯನ್ನು ಕೊಡಲಾಗುತ್ತದೆ ಎಂದರೆ ಸರಿ. ಸರ್ಕಾರದ ನಿಯಮಗಳ ಪ್ರಕಾರ ನಿರ್ದಿಷ್ಟ ವರ್ಗದ ಜನರಿಗೆ ಮಾತ್ರ ನ್ಯಾಯಾಬೆಲೆ ಅಂಗಡಿ ಮೂಲಕ ಪಡಿತರ ದಾನ್ಯಗಳನ್ನು ನೀಡಬೇಕು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ಕಾರ ನಿಗಧಿ ಪಡಿಸಿದ ಬೆಲೆಗೆ ಪಡಿತರ ದಾನ್ಯ ಮಾರಾಟ ಮಾಡಬೇಕು ಎಂದರೆ ಸರಿ. ಆ ರೀತಿ ಮಾರಾಟ ಪ್ರಕ್ರಿಯೆಯಲ್ಲಿ ಪರವಾನಿಗಿ ಪಡೆದವರಿಗೆ ಪ್ರತಿ ಕೆಜಿಗೆ ಇಂತಿಷ್ಟು ಎಂದು ಕಮೀಷನ್ ನೀಡಲಾಗುತ್ತದೆ ಎಂದರೆ ಸರಿ. ಸದರಿ ಕಮೀಷನ್ ಶ್ರಮಕ್ಕೆ ಕೊಟ್ಟ ಪ್ರತಿಫಲವಾಗಿರುತ್ತದೆ ಎಂದರೆ ಸಾಕ್ಷಿ ಯಾರು ದುಡಿದಿರುತ್ತಾರೋ ಅವರಿಗೆ ನೀಡಿದ ಪ್ರತಿಫಲ ಎಂದು ನುಡಿಯುತ್ತಾರೆ. 1984 ರಲ್ಲಿ 14 ನೇ ಪ್ರತಿವಾದಿ ಅವರ ಸ್ನೇಹಿತರ ಜತೆ ಶ್ರೀ ವಿನಾಯಕ ಪೈನಾನ್ಸ ಕಾರ್ಪೋರೇಷನ್ ಪ್ರಾರಂಭಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಆದರೆ 14 ನೇ ಪ್ರತಿವಾದಿನಮ್ಮ ಕುಟುಂಬದ ಪ್ರತಿನಿಧಿಯಾಗಿ ಆ ಪೈನಾನ್ಸನ್ನು ಪ್ರಾರಂಭಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ 14 ನೇ ಪ್ರತಿವಾದಿ ನಮ್ಮ ಕುಟುಂಬದ

ಪ್ರತಿನಿಧಿಯಾಗಿ ಸದರಿ ಫೈನಾನ್ಸ್ ಪ್ರಾರಂಭಿಸಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಫೈನಾನ್ಸ್ ವ್ಯವಹಾರ 14 ನೇ ಪ್ರತಿವಾದಿಯ ಸ್ವಂತ ವ್ಯವಹಾರವಾಗಿತ್ತು ಎಂದರೆ ಸರಿಯಲ್ಲ. ಸದರಿ ಫೈನಾನ್ಸ್‌ಗೆ 14 ನೇ ಪ್ರತಿವಾದಿಯನ್ನು ಯಾವುದೇ ಪ್ರತಿನಿಧಿಯನ್ನಾಗಿ ಮಾಡದೇ ಇದ್ದರೂ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

14 ನೇ ಪ್ರತಿವಾದಿ 1988 ರಲ್ಲಿ ಎಲ್ ಐ ಸಿ ಏಜೆಂಟಾಗಿ ಕೆಲಸ ಪ್ರಾರಂಭಿಸಿದರು ಎಂದರೆ ಸಾಕ್ಷಿ ಏಜೆಂಟಾಗಿರುವ ವಿಚಾರ ನನಗೆ ಗೊತ್ತು, ಆದರೆ ಯಾವಾಗಿನಿಂದ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 14 ನೇ ಪ್ರತಿವಾದಿ 1988 ರಿಂದ 2013-14 ರವರೆಗೆ ಎಲ್ ಐ ಸಿ ಏಜೆಂಟಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 14 ನೇ ಪ್ರತಿವಾದಿ ಎಲ್ ಐ ಸಿ ಏಜೆಂಟಾಗಿ ಕೆಲಸ ಮಾಡುತ್ತಿದ್ದ ಕಾರಣ ಅವರಿಗೆ ಸಾಕಷ್ಟು ಕಮೀಷನ್ ಬರುತ್ತಿತ್ತು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ, ಆದರೆ ನನ್ನ ತಂದೆ ಸಹ 14 ನೇ ಪ್ರತಿವಾದಿ ಮೂಲಕ ಅವರ ಸ್ನೇಹಿತರ 2-3 ಪಾಲಿಸಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. 1992 ರಲ್ಲಿ 14 ನೇ ಪ್ರತಿವಾದಿ ಅವರ ಸ್ನೇಹಿತ ಜತೆ ಸೇರಿಕೊಂಡು ಶ್ರೀ ಗಣೇಶ ಫೈನಾನ್ಸ್ ಕಾರ್ಪೋರೇಷನ್ ಪ್ರಾರಂಭಿಸಿದರು ಎಂದರೆ ಸಾಕ್ಷಿ ಸದರಿ ಫೈನಾನ್ಸನ್ನು ನನ್ನ ತಾತನ

ಮಾರ್ಗದರ್ಶನದಲ್ಲಿ 14 ನೇ ಪ್ರತಿವಾದಿ ಒಟ್ಟು ಕುಟುಂಬದ ಪ್ರತಿನಿಧಿಯಾಗಿ ಪ್ರಾರಂಭಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪೈನಾನ್ಸಿನಲ್ಲಿ 14 ನೇ ಪ್ರತಿವಾದಿ ಆಡಳಿತ ಪಾಲುದಾರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ಅವರಿಗೆ ಹೆಚ್ಚುವರಿಯಾಗಿ ಲಾಭಾಂಶವನ್ನು ನೀಡಲಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಸುಪ್ರೀಮ್ ಸ್ಟೋನ್ ಸೆಂಟರನ್ನು 14 ನೇ ಪ್ರತಿವಾದಿ ಪ್ರಾರಂಭಿಸಿರುತ್ತಾರೆ ಎಂದರೆ ಸಾಕ್ಷಿ ಸದರಿ ಸ್ಟೋನ್ ಸೆಂಟರನ್ನು ನನ್ನ ತಂದೆ ಪ್ರಾರಂಭಿಸಿ ಅವರೇ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. 14 ನೇ ಪ್ರತಿವಾದಿ ತಮ್ಮ ಬಿಡುವಿನ ಸಮಯದಲ್ಲಿ ಬೇರೆ ಬೇರೆ ಸ್ಥಳಗಳಿಂದ ದುಬಾರಿ ಬೆಲೆಯ ರೇಷ್ಮೆ ಸೀರೆಗಳನ್ನು ತಂದು ಮನೆ ಮನೆಗೆ ಹೋಗಿ ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ.

14 ನೇ ಪ್ರತಿವಾದಿ ಹಲವಾರು ವೃತ್ತಿಗಳ ಮೂಲಕ ಸ್ವಯಾರ್ಜಿತವಾಗಿ ಸಾಕಷ್ಟು ಹಣ ಸಂಪಾದನೆ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ಪ್ರತಿವಾದ ಪತ್ರದಲ್ಲಿ ಕಾಣಿಸಿರುವ 1 ರಿಂದ 8 ನೇ ಸ್ವತ್ತುಗಳು ಯಾರಿಂದ ಯಾವಾಗ ಖರೀದಿಸಲಾಗಿದೆ ಎಂದು ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ನನಗೆ ಸ್ಪಷ್ಟವಾಗಿ ಮಾಹಿತಿ ನೆನಪಿಗೆ ಬರುತ್ತಿಲ್ಲ, ಆದರೆ ಬಿ ಹೆಚ್ ರಸ್ತೆಯಲ್ಲಿರುವ ಆಸ್ತಿಯನ್ನು ವೀರಣ್ಣ ಗುಪ್ತರವರಿಂದ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ.

ಸದರಿ ಸ್ವತ್ತಿನ ಅಸೆಸ್ಮೆಂಟ್ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಯಾವಾಗ ಮತ್ತು ಎಷ್ಟು ಬೆಲೆಗೆ ಖರೀದಿಸಲಾಗಿದೆ ಎಂದರೆ ಸಾಕ್ಷಿ 1985-90 ರಲ್ಲಿ ಖರೀದಿಸಲಾಗಿದೆ ಆದರೆ ಎಷ್ಟು ಮೊತ್ತಕ್ಕೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 14 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ನನ್ನ ತಂದೆ ಸಲ್ಲಿಸಿರುವ ಪ್ರತಿವಾದ ಪತ್ರದ ಆಧಾರದ ಮೇಲೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1976-77 ರಲ್ಲಿ 14 ನೇ ಪ್ರತಿವಾದಿ ನನ್ನ ತಂದೆ ಸಲ್ಲಿಸಿರುವ ಪ್ರತಿವಾದ ಪತ್ರದ 4 ನೇ ಆಸ್ತಿಯನ್ನು ಶಾಮಣ್ಣರವರಿಂದ ಸ್ವಯಾರ್ಜಿತವಾಗಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ನಂತರ ಸದರಿ ಆಸ್ತಿಯ ಸಂಬಂದ ಇದೇ ನ್ಯಾಯಾಲಯದಲ್ಲಿ ಒಂದು ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ 14 ನೇ ಪ್ರತಿವಾದಿಯನ್ನು ಪ್ರತಿವಾದಿಯನ್ನಾಗಿ ಕಾಣಿಸಲಾಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ 14 ನೇ ಪ್ರತಿವಾದಿಯು ದಾವೆ ಹೂಡಿದವರ ಕುಟುಂಬದವರಿಗೆ ಪ್ರತಿವಾದ ಪತ್ರದ ಐಟಂ ನಂ.4 ರ ಆಸ್ತಿಯ ಕೆಲವು ಅಂಶದ ಭಾಗವನ್ನು ನೀಡಬೇಕು ಎಂದು ಆದೇಶವಾಗಿತ್ತು ಎಂದರೆ

ಸಾಕ್ಷಿ ಸದರಿ ದಾವೆಗೆ ನನ್ನ ತಂದೆ ಸಹ ಸಾಕಷ್ಟು ಹೋರಾಟ ಮಾಡಿದ್ದು, ಈ ನ್ಯಾಯಾಲಯದಲ್ಲಿ ಆದೇಶ 14 ನೇ ಪ್ರತಿವಾದಿ ಪರ ಆಗಿದೆ ಎಂದು ತಿಳಿಸಿದ್ದು, ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಸದರಿ ಆದೇಶ ನಮ್ಮ ವಿರುದ್ಧವಾಗಿದೆ ಎಂದು ಹೇಳಿದ ಬಗ್ಗೆ ನನಗೆ ತಿಳಿದಿದೆ ಎಂದು ನುಡಿಯುತ್ತಾರೆ.

ಪ್ರತಿವಾದಿ ಪತ್ರದ ಐಟಂ ನಂ.5 ರ ಆಸ್ತಿಯನ್ನು ದಿನಾಂಕ 23/04/1984 ಮತ್ತು 12/01/1987 ರಂದು 14 ನೇ ಪ್ರತಿವಾದಿ ನಿಂಗಮ್ಮರವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಖರೀದಿಸಲು ಯಾರು ಎಷ್ಟು ಹಣ ತೊಡಗಿಸಿದ್ದರು ಎಂದರೆ ಸಾಕ್ಷಿ ನನ್ನ ತಾತನಿಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಒಟ್ಟು ಕುಟಂಬದ ಆದಾಯದಿಂದ ಖರೀದಿಸದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಐಟಂ ನಂ.6 ರ ಆಸ್ತಿಯನ್ನು ದಿನಾಂಕ 10/06/1986 ರಂದು ವೀರಣ್ಣ ಗುಪ್ತರವರಿಂದ 14 ನೇ ಪ್ರತಿವಾದಿ ಖರೀದಿಸಿದ್ದರು ಎಂದರೆ ಸಾಕ್ಷಿ ಸದರಿ ಆಸ್ತಿಯನ್ನು ಸಹ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಆರ್ ಸಿ ಸಿ ಕಮರ್ಷಿಯಲ್ ಕಾಂಪ್ಲೆಕ್ಸ್ ಎಂದು ಪ್ರತಿವಾದ ಪತ್ರದಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ. 1986 ರಲ್ಲಿ ಸದರಿ ಆಸ್ತಿ

ಹಳೆಯ ಕಪ್ಪು ಹೆಂಚಿನ ಮನೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 14 ನೇ ಪ್ರತಿವಾದಿ ಸದರಿ ಆಸ್ತಿಯನ್ನು ಖರೀದಿಸಿದ ನಂತರ ಹಳೆಯ ಹೆಂಚಿನ ಮನೆಯನ್ನು ತೆರವು ಗೊಳಿಸಿ ಅಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿ ಕುಟುಂಬದಲ್ಲಿ ವಿಮರ್ಶೆ ಮಾಡಿ ಚರ್ಚಿಸಿ ಕಟ್ಟಲಾಗಿದೆ ಎಂದು ನುಡಿಯುತ್ತಾರೆ. ಸದರಿ ವಾಣಿಜ್ಯ ಮಳಿಗೆಯನ್ನು 14 ನೇ ಪ್ರತಿವಾದಿ ತಮ್ಮ ಸ್ವಂತ ಹಣ ವಿನಿಯೋಗಿಸಿ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ಅಜ್ಜನ ಮಾರ್ಗದರ್ಶನದಂತೆ ಕಟ್ಟಲಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ 14 x 36 ಹಾಗೂ 14 x 33 ಅಡಿ ವಿಸ್ತೀರ್ಣ ಎಂದು ಕಾಣಿಸಿದ್ದು ಆ ಸ್ಥಳದಲ್ಲಿ ಅಷ್ಟು ಜಾಗ ಇರುವುದಿಲ್ಲ ಹಾಗೂ ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕಾಗಿ ಸಾಕಷ್ಟು ಸ್ಥಳ ಭೂ ಸ್ವಾಧೀನವಾಗಿರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಐಟಂ ನಂ.3 ರ ಸ್ವತ್ತನ್ನು 18/04/1991 ರಂದು ಬಿ ಹೆಚ್ ರಂಗಯ್ಯ ಮತ್ತು ಅವರ ಮಕ್ಕಳಿಂದ 14 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಐಟಂ ನಂ.1 ರ ಸ್ವತ್ತನ್ನು 15/07/1994 ರಂದು ಬಿ ಹೆಚ್ ವರದಪ್ಪ ಮತ್ತು ಅವರ ಮಕ್ಕಳಿಂದ 14 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ

ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಐಟಂ ನಂ.2 ರ ಸ್ವತ್ತನ್ನು 12/05/1998 ರಂದು ಕುಕ್ಕುಡಪ್ಪ ಮತ್ತು ಅವರ ಮಕ್ಕಳಿಂದ 14 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಐಟಂ ನಂ.1 ಮತ್ತು 2 ರ ಸ್ವತ್ತುಗಳಲ್ಲಿ ಖರೀದಿ ಕಾಲಕ್ಕೆ ಏನಿತ್ತು ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿಯ ಕಾಲಕ್ಕೆ ಆ ಸ್ವತ್ತುಗಳು ಖುಷ್ಕಿ ಜಮೀನುಗಳಾಗಿದ್ದವು ಎಂದರೆ ಸಾಕ್ಷಿ ಆಸ್ತಿಗಳ ಹಿಂಬದಿ ಕೆರೆ ಇದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳನ್ನು ಖರೀದಿಸಿದ ನಂತರ 14 ನೇ ಪ್ರತಿವಾದಿ ಬೋರ್ ವೆಲ್ ತೆಗೆಸಿ ಅಡಿಕೆ ಮತ್ತು ತೆಂಗಿನ ತೋಟ ನಿರ್ಮಿಸಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಿಂದ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳ ಖರೀದಿ ಮತ್ತು ಅಭಿವೃದ್ಧಿಗಾಗಿ 14 ನೇ ಪ್ರತಿವಾದಿ ಪಿ ಸಿ ಎ ಮತ್ತು ಆರ್ ಡಿ ಬ್ಯಾಂಕಿನಿಂದ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ 14 ನೇ ಪ್ರತಿವಾದಿ ಸಾಲ ಪಡೆಯುವ ಕಾಲಕ್ಕೆ ನನ್ನ ದೊಡ್ಡಪ್ಪ ಚಿಕ್ಕಪ್ಪಂದಿರು ಮತ್ತು ಅಜ್ಜ ಸಹಿ ಮಾಡಿರುತ್ತಾರಾ ಎಂದರೆ ಸಾಕ್ಷಿ ಮಾಡಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು 14 ನೇಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುವುದರಿಂದ

ಅವರೇ ಸಾಲ ಪಡೆದರು ಎಂದರೆ ಸರಿಯಲ್ಲ. ಸದರಿ ಸಾಲವನ್ನು ನಿಗಧಿತ ವೇಳೆಯಲ್ಲಿ 14 ನೇ ಪ್ರತಿವಾದಿ ಪ್ರಮಾಣಿಕವಾಗಿ ಮರುಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ, ಆ ರೀತಿ ಮಾಡಿದ್ದರೆ ಕುಟುಂಬದ ಪರವಾಗಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 23/08/1999 ರಂದು ಸಿ ಆರ್ ಸೋಮಶೇಖರ್ ರವರಿಂದ ಪ್ರತಿವಾದ ಪತ್ರದ ಐಟಂ ನಂ.7 ರ ಆಸ್ತಿಯನ್ನು 14 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. 14 ನೇ ಪ್ರತಿವಾದಿ ಪ್ರತಿವಾದ ಪತ್ರದ ಐಟಂ ನಂ.7 ರ ಆಸ್ತಿಯನ್ನು ಖರೀದಿಸಿದ ನಂತರದಲ್ಲಿ ದಾವಾ ಐಟಂ ನಂ.8 ರ ಸ್ವತ್ತನ್ನು ಬಿಟ್ಟು ಸದರಿ ಪ್ರತಿವಾದ ಪತ್ರ ಐಟಂ ನಂ.7 ರ ಸ್ವತ್ತಿಗೆ ತಮ್ಮ ವಾಸ್ತವ್ಯ ಬದಲಾಯಿಸಿರುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದ ಪತ್ರದ ಐಟಂ ನಂ.8 ರ ಆಸ್ತಿ ವಾದಿ ನಟರಾಜುರವರಿಗೆ ಸೇರಿದ್ದು ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಸಂಬಂದವಾಗಿ ನನ್ನ ತಂದೆ ಮತ್ತು ವಾದಿಗೂ ಕಡೂರಿನ ಸಿವಿಲ್ ನ್ಯಾಯಾಲಯದಲ್ಲಿ ಒಂದು ದಾವೆ ದಾಖಲಾಗಿತ್ತು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆ ಸಂಬಂದವಾಗಿ ನನ್ನ

ತಂದೆ ಕಡೂರಿನ ಸಿವಿಲ್ ನ್ಯಾಯಾಲಯದಲ್ಲಿ ಒಂದು ಕೇವಿಯಟ್ ಅರ್ಜಿಯನ್ನು 2007 ರಲ್ಲಿ ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇವಿಯಟ್ ನಲ್ಲಿ ನನ್ನ ತಂದೆ ಮತ್ತು ಅವರ ಸಹೋದರರು ಬೇರೆ ಬೇರೆ ವಾಸ ಮಾಡುತ್ತಿದ್ದು, ಆಸ್ತಿಗಳ ವಿಚಾರವಾಗಿ ಯಾವುದೇ ಸಂಬಂದ ಇಲ್ಲ, ಆದರೆ ರಕ್ತ ಸಂಬಂದ ಮಾತ್ರ ಇದೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ಬದುಕಿದ್ದಾಗಲೇ ಆಸ್ತಿಗಳ ವಿಚಾರವಾಗಿ ನನ್ನ ತಂದೆ ಮತ್ತು ಅವರ ಸಹೋದರರು ಗಳಿಸಿದ ಆಸ್ತಿಗಳು ಅವರವರ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆದ ಕಾರಣ ವಾದಿ ದಾವೆಯನ್ನು ಹೂಡುವ ಕಾಲಕ್ಕೆ ಸ್ವಯಾರ್ಜಿತ ಆಸ್ತಿಗಳ ಮೇಲೆ ದಾವೆ ಹೂಡದೇ ಕೇವಲ ಒಟ್ಟು ಕುಟುಂಬದ ಆಸ್ತಿಗಳ ಮೇಲೆ ಮಾತ್ರ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಆದರೂ ಸಹ ನನ್ನ ತಂದೆ ಅವರು ಸಹೋದರರು ಮಾಡಿರುವ ಆಸ್ತಿಗಳನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಬೆಲೆ ಅಂಗಡಿ 14 ನೇ ಪ್ರತಿವಾದಿಯ ವೈಯುಕ್ತಿಕ ಆಸ್ತಿ ಎಂದರೆ ಸರಿಯಲ್ಲ. ನ್ಯಾಯಬೆಲೆ ಅಂಗಡಿಯ ಪರವಾನಿಗಿಯನ್ನು ವಿಭಾಗದ ಮುಖಾಂತರ ಹಂಚಿಕೊಳ್ಳಲು ಬರುವುದಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಐಟಂ ನಂ.1

ರಿಂದ 7 ರ ಆಸ್ತಿಗಳನ್ನು 14 ನೇ ಪ್ರತಿವಾದಿ ತಮ್ಮ ಸ್ವಂತ ಆದಾಯದಿಂದ ಗಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಗಳಿಸಲು ನನ್ನ ತಂದೆಯಾಗಲಿ, ವಾದಿಯಾಗಲಿ, ನನ್ನ ಅಜ್ಜನಾಗಲಿ ಯಾವುದೇ ಹಣ ಸಹಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹಣ ಸಹಾಯ ಮಾಡಿದ ಬಗ್ಗೆ ಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.